## ಕೂಬಸ್

ಮಾರುಕಟ್ಟೆಗೆ ಹೋದಾಗ ತಂಗಿಯ ಮಗ ಆಟದ ಸಾಮಾನಿನ ಅಂಗಡಿಯ ಮುಂದೆ ನಿಂತು 'ಕೂಬಸ್' ಬೇಕು ಎಂದು ಹಟ ಮಾಡತೊಡಗಿದ. ಸರಿ, ಅಂಗಡಿಯವನಿಗೆ ಬಸ್ಸು ತೋರಿಸಪ್ಪಾ ಎಂದಿದ್ದಾಯಿತು. ಯಾವುದನ್ನು ತೋರಿಸಿದರೂ, ಇದಲ್ಲ 'ಕೂಬಸ್' ಬೇಕು ಎನ್ನತೊಡಗಿದ. ತಲೆಕೆಟ್ಟು ಹೋಯಿತು ಅಂಗಡಿಯವನಿಗೆ. ಮಗುವನ್ನು ಎತ್ತಿಕೊಂಡು ನಿನಗೆ ಯಾವ ಬಸ್ಸು ಬೇಕೋ ತೆಗೆದುಕೋ ಎಂದು ಆಟಿಕೆಗಳ ಶೆಲ್ಫ್ ಬಳಿ ಕರೆದುಕೊಂಡು ಹೋದ. ಅಲ್ಲಿದ್ದ ರೈಲನ್ನು ಗಬಕ್ಕನೆ ತೆಗೆದುಕೊಂಡು, ಖುಷಿಯಿಂದ 'ಕೂsss... ಬಸ್, ಚುಕುಬುಕು ಚುಕುಬುಕು...' ಅಂತಾ ಬಾಯಿಗೆ ಕೈಯಿಟ್ಟು ಕೂಗತೊಡಗಿದಾಗ ಎಲ್ಲರೂ ಹಣೆ ಚಚ್ಚಿಕೊಂಡಿದ್ದಾಯಿತು.

**ನಳಿನಿ ಟಿ. ಭೀಮಪ್ಪ**





## ನಾಗೇಂದ್ರ ABCDEFG!

ಈ ಘಟನೆ ನಡೆದದ್ದು 1982ರಲ್ಲಿ. ದೂರದ ಮಂಗಳೂರಿನಲ್ಲಿ ಉದ್ಯೋಗಕ್ಕೆ ಸೇರಿದ್ದೆ. 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿದ್ದ ಕಥೆಗಳನ್ನು ಒಟ್ಟು ಮಾಡಿ ಪುಸ್ತಕ ರೂಪಕ್ಕೆ ತರಲು ಬೈಂಡ್ ಮಾಡಿಸಲು ಪ್ರಿಂಟಿಂಗ್ ಪ್ರೆಸ್‌ಗೆ ಕೊಟ್ಟಿದ್ದೆ. ನನ್ನ ಹೆಸರು ಕೇಳಿದರು. 'ನಾಗೇಂದ್ರ ಜಿ' ಎಂದು ಹೇಳಿದೆ. ಆಗ ಪ್ರೆಸ್ಸಿನ ಸಿಬ್ಬಂದಿ 'Nagendra Jee' ಎಂದು ಬರೆದುಕೊಂಡರು. ಆಗ ನಾನು G ಎಂದರೆ Jee ಅಲ್ಲ ಎಂದು ಮನವರಿಕೆ ಮಾಡಿಸಲು, 'ನಾಗೇಂದ್ರ G, ABCDEF...G' ಎಂದು ವಿವರಿಸಿದೆ. ಆತ, 'ನಾಗೇಂದ್ರ ABCDEFG' ಎಂದು ಬರೆದುಕೊಂಡ!

**ಜಿ. ನಾಗೇಂದ್ರ ಕಾವೂರು**

ಕಲೆ: ಗಣೇಶ ಆಚಾರ್ಯ